ತಮ್ಮ ಮಠಕ್ಕೆ ಬರ ಮಾಡಿಕೊಳ್ಳಬೇಕೆಂಬ ಆಸೆ. ಆದರೆ ಕುವೆಂಪು ಅವರಿಗೆ ರಾಮಕೃಷ್ಣಾಶ್ರಮವೊಂದನ್ನು ಬಿಟ್ಟರೆ, ಯಾವುದೇ ಮಠ, ದೇಗುಲಗಳಿಗೆ ಹೋಗುವ ಅಭ್ಯಾಸವಿರಲಿಲ್ಲ. ಸುತ್ತೂರು ಶ್ರೀಗಳು ಅನೇಕ ಬಾರಿ ಪ್ರಯತ್ನಪಟ್ಟರೂ ಅವರ ಆಸೆ ಕೈಗೂಡಲಿಲ್ಲ. ಪ್ರಭುಶಂಕರ ಅವರು ಒಮ್ಮೆ ಮಠಕ್ಕೆ ಬಂದಾಗ, 'ಕುವೆಂಪು ಅವರನ್ನು ಮಠಕ್ಕೆ ಕರೆದುಕೊಂಡು ಬನ್ನಿ' ಎಂದರು ಸ್ವಾಮಿಗಳು. ಪ್ರಭುಶಂಕರ ಅವರು, 'ಆಯಿತು, ಕರೆದುಕೊಂಡು ಬರುತ್ತೇನೆ' ಎಂದಷ್ಟೇ ಹೇಳಿ, ನೇರವಾಗಿ ಕುವೆಂಪು ಅವರ ಮನೆಗೆ ಹೋಗಿ – 'ಸುತ್ತೂರು ಶ್ರೀಗಳಿಗೆ ನಾನು ಭರವಸೆ ಕೊಟ್ಟು ಬಂದಿದ್ದೇನೆ. ತಾವು ಅಲ್ಲಿಗೆ ಆಗಮಿಸಿ, ಅವರು ಮಾಡುತ್ತಿರುವ ಜಾತಿ, ಧರ್ಮವನ್ನು ಮೀರಿದ ಜ್ಞಾನ ದಾಸೋಹವನ್ನು ನೋಡಬೇಕು' ಎಂದರು. ಇದನ್ನು ಕೇಳಿಸಿಕೊಳ್ಳುತ್ತಾ ತುಸು ಹೊತ್ತು ಮೌನವಾಗಿ ಕುಳಿತಿದ್ದ ಕುವೆಂಪು ಅವರು, 'ಯಾರನ್ನು ಕೇಳಿ, ಒಪ್ಪಿಗೆ ಕೊಟ್ಟು ಬಂದೆ?' ಎಂದರು. ಅದಕ್ಕೆ ಪ್ರಭುಶಂಕರ, 'ಯಾರನ್ನು ಏಕೆ ಕೇಳಬೇಕು, ನನ್ನೊಳಗೆ ಕುಳಿತು ನೀವು ಒಪ್ಪಿಕೋ, ಬರುತ್ತೇನೆ' ಎಂದು ಹೇಳಿದ ಹಾಗಾಯಿತು ಅದಕ್ಕೆ ಒಪ್ಪಿಕೊಂಡೆ. ಈಗ ನೀವು ಒಪ್ಪಿಕೊಳ್ಳುತ್ತೀರೋ, ಇಲ್ಲವೋ?' ಎಂದರು.

ಸಣ್ಣಗೆ ನಕ್ಕ ಕುವೆಂಪು ಅವರು, 'ಹುಚ್ಚ... ಹುಚ್ಚ...' ಎಂದು ಹೇಳುತ್ತಾ, 'ಕ್ಯಾಲೆಂಡರ್‌ನಲ್ಲಿ ನೋಡು, ಯಾವ ದಿನಾಂಕ ಬಿಡುವಾಗಿರುತ್ತೇನೆ, ಹೋಗಿ ಬರೋಣ' ಎಂದರು.

ಈ ಗುರು–ಶಿಷ್ಯರ ಸಂಬಂಧ ಇಂತಹದ್ದಾಗಿತ್ತು. ದೊಡ್ಡ ದೊಡ್ಡ ರಾಜಕಾರಣಿಗಳು, ಸಮಾಜದ ಪ್ರತಿಷ್ಠಿತರು ಹೇಳಿದ್ದರೂ ಒಪ್ಪದಿದ್ದ ಕುವೆಂಪು ಅವರನ್ನು ಪ್ರಭುಶಂಕರ ಮಠಕ್ಕೆ ಕರೆತಂದಿದ್ದರು! ಪ್ರಭುಶಂಕರ ಅವರ ಒಳ ಹೊರಗನ್ನೆಲ್ಲಾ ಕುವೆಂಪು ವ್ಯಕ್ತಿತ್ವ ವ್ಯಾಪಿಸಿಕೊಂಡಿತ್ತು. ಆ ಕಾಲದಲ್ಲಿಯೇ ಇವರು ಅಂತರ್ಜಾತಿಯ ವಿವಾಹ ಮಾಡಿಕೊಂಡರು. ಪತ್ನಿ ಡಾ. ಶಾಂತಾ, ವೈದ್ಯೆಯಾಗಿದ್ದರು. ಆ ಕಾಲದ ಪ್ರತಿಷ್ಠಿತ ರಾಜಕೀಯ ಕುಟುಂಬ ತುಳಸೀದಾಸಪ್ಪ, ಯಶೋದಮ್ಮ ದಾಸಪ್ಪನವರ ಕುಟುಂಬಕ್ಕೆ ಸೇರಿದವರು ಡಾ. ಶಾಂತಾ. ಒಂದು ಕಡೆ ಕುವೆಂಪು ಪ್ರಭಾವಲಯ, ಮತ್ತೊಂದು ಕಡೆ ರಾಜಕೀಯ ಕುಟುಂಬದ ಸಂಬಂಧ. ಪ್ರಭುಶಂಕರ ಅವರು ಮನಸ್ಸು ಮಾಡಿದ್ದರೆ, ಉಪಕುಲಪತಿ, ಹಾಗೆಯೇ ಬೇರೆ ಬೇರೆ ರಾಜಕೀಯ ಸ್ಥಾನಮಾನಗಳನ್ನು ಹೊಂದಬಹುದಾಗಿತ್ತು. ಹೀಗೆ ಕೇಳಿದಾಗ ಅವರು ಹೇಳುತ್ತಿದ್ದುದು ಒಂದೇ ಮಾತು, 'ಕುವೆಂಪು ಅವರ ಪಾಠ ಪ್ರವಚನಗಳು, ಅವರ ವ್ಯಕ್ತಿತ್ವದ ಪ್ರಭಾವಲಯದಲ್ಲಿ ವಿಹರಿಸುವ ಆನಂದದ ಮುಂದೆ, ಅಂತಹ ಯಾವುದೇ ಸ್ಥಾನಮಾನಗಳು ನನಗೆ ತುಂಬಾ ಕ್ಷುಲ್ಲಕವಾದುವು ಎನಿಸುತ್ತಿತ್ತು.' ಈ ಮಾತನ್ನು ಅವರು ಹೇಳಿದಾಗ ಕೇಳಿದವರೇ ಕುಬ್ಜರಾಗಿ ರಸಾತಳಕ್ಕೆ ಇಳಿದು ಬಿಡುತ್ತಿದ್ದರು.

1950ರಲ್ಲಿ ಮೈಸೂರು ವಿ.ವಿ.ಯಲ್ಲಿ ಕನ್ನಡ ಅಧ್ಯಾಪಕರಾಗಿ ವೃತ್ತಿ ಆರಂಭಿಸಿದ ಪ್ರಭುಶಂಕರ, ಮುಂದೆ ಸುಮಾರು 17 ವರ್ಷಗಳ ಕಾಲ ಪ್ರಸಾರಾಂಗದ ನಿರ್ದೇಶಕರಾಗಿ ಸೇವೆ ಸಲ್ಲಿಸಿದರು. ಎರಡು ವರ್ಷಗಳ ಕಾಲ ಬನಾರಸ್ ಹಿಂದೂ ವಿ.ವಿ.ಯ ಕನ್ನಡ ವಿಭಾಗದ ಪ್ರಪ್ರಥಮ ಸಂದರ್ಶಕ ಪ್ರಾಧ್ಯಾಪಕರಾದರು. ನಿವೃತ್ತರಾದ ಬಳಿಕ ಅಮೆರಿಕಾ, ಬ್ರಿಟನ್, ಆಸ್ಟ್ರಿಯಾ, ಸ್ವಿಡ್ಜರ್ಲೆಂಡ್‌ಗಳಿಗೆ ಆಹ್ವಾನಿತರಾಗಿ ವಿಶೇಷ ಉಪನ್ಯಾಸಗಳನ್ನು ನೀಡಿದರು. ಕನ್ನಡದಷ್ಟೇ ಇಂಗ್ಲಿಷ್ ಭಾಷೆಯ ಮೇಲೆಯೂ ಪ್ರಭುತ್ವ ಹೊಂದಿದ ವಿರಳ ಕನ್ನಡ ಪ್ರಾಧ್ಯಾಪಕರಲ್ಲಿ ಪ್ರಭುಶಂಕರ ಸಹ ಒಬ್ಬರು.

ಗದ್ಯದಲ್ಲಿ ಬರೆದ ಸ್ವಂತ ಬರಹಗಳು, ಅನುವಾದಗಳು, ವಿಮರ್ಶೆ, ಹಾಸ್ಯ ಈ ಒಂದೊಂದರಲ್ಲಿಯೂ ಅವರ ಸ್ವೋಪಜ್ಞ ಪ್ರತಿಭೆಯ ಛಾಪು ಎದ್ದು ಕಾಣುತ್ತದೆ. ಅವರ 'ಅಮೆರಿಕದಲ್ಲಿ ನಾನು ಮತ್ತು ಶಾಂತಿ' ಪ್ರವಾಸ ಕಥನಕ್ಕೆ ಮುನ್ನುಡಿ ಬರೆದ ಕುವೆಂಪು ಅವರ